ಶ್ರೀ ಡಿ. ದೇವರಾಜ ಅರಸ್.—ಇಲಾಖಾ ಮೊಖ್ತೇ ಸರರುಗಳಿಂದ ವರದಿಯನ್ನು. ನಿರೀಕ್ಷಿಸಲಾಗುತ್ತಿದೆ ಎಂದು ಉತ್ತರದಲ್ಲಿ ತಿಳಿಸೋಣವಾಗಿದೆ. ಇಲಾಖೆಯ ಮೊಖ್ತೇಸರರಿಗೆ, ಪ್ರತಿಯೊಂದು ಸ್ಥಳದ ಅಥವಾ ಗ್ರಾಮದ ಮುಖ್ಯಸ್ಥರುಗಳನ್ನು ಕರೆಸಿಕೊಂಡು ಅವರೊಡನೆ ಈ ವಿಷಯಗಳನ್ನು ಸಮಾಲೋಚನೆ ಮಾಡಿ, ಅನಂತರ ಅವರು ತಮಗೆ ಒಂದು ನಲಹೆಯನ್ನು ಕಳುಹಿಸಿಕೊಡುವಂತೆ ತಾವು ಅವರಿಗೆ ಅಪ್ಪಣೆಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಹಾಗೆಲ್ಲಾ ಕರೆಸಿ ಸಮಾಲೋಚನೆ ಮಾಡುವುದು ಬಹಳ ಕಷ್ಟ, ಅದಕ್ಕೆ ಬದಲಾಗಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಒಂದು ಸಭೆಯನ್ನು ಕರೆದು ಅವರೊಡನೆ ಸಮಾಲೋಚನೆ ಮಾಡಿ, ಆಯಾ ಜಿಲ್ಲೆಗಳಿಗೇನೇನು ಅಗತ್ಯವಿದೆ ಎಂಬುದರ ಬಗ್ಗೆ ಅವರೆಲ್ಲರ ಅಭಿಪ್ರಾಯಗಳನ್ನೂ ಕ್ರೋಡೀಕರಿಸಿ ಇದನ್ನು ನಿರ್ಣಯ ಮಾಡಬೇಕಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರ್ಡಾರರ ಮೂಲಕ ವಿವರಗಳನ್ನು ತಿಳಿದುಕೊಂಡು ಆಯಾ ತಾಲ್ಲೂಕಿನ ಶಾಸನ ಸಭಾ ಸದಸ್ಯರನ್ನೂ ಇತರ ಮುಖ್ಯಸ್ಥರನ್ನೂ ಸೇರಿಸಿ ಅವರ ಅಭಿಪ್ರಾಯವನ್ನು ಪಡೆದು, ಅನಂತರ ಜಿಲ್ಲಾ ಮಟ್ಟದಲ್ಲಿಯೂ ಈ ರೀತಿ ಮಾಡಿ ಮುಂದುವರಿಯುವುದರಿಂದ ಗ್ರಾಮಾಂತರ ಗಳಲ್ಲಿ ಹೆಚ್ಚು ಅನುಕೂಲಮಾಡಬಹುದಲ್ಲವೆ?

ಶ್ರೀ ಕೆ. ಹನುಮಂತಯ್ಯ.—ತಾವು ಹೇಳಿದ ಹಾಗೆ ಪ್ರತಿ ತಾಲ್ಲೂಕಿನಲ್ಲಿಯೂ ಸಮಾಲೋಚನಾ ಸಭೆಗಳನ್ನು ನಡೆಸಿ, ಅನಂತರ ಡಿಸ್ಟ್ರಿಕ್ಟ್‌ಗಳಲ್ಲಿ ಸಭೆ ನಡೆಸಿ ಮಾಡಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ತಮಗೇ ಗೊತ್ತಿರುವ ಹಾಗೆ ಐದಾರು ತಿಂಗಳೊಳಗೆ ಇದು ಪೂರ್ತಿಯಾಗಬೇಕು. ಕೆಲವು ವಿಷಯಗಳಲ್ಲಿ ಆವಶ್ಯಕವೆಂದು ಕಂಡುಬಂದರೆ ಹಾಗೂ ಮಾಡಬಹುದು.

Sri B. NARAYANASWAMY.—Sir, will the Government call for proposals from City Municipalities and Corporations?

Sri K. HANUMANTHAIYA.—Municipalities are well in advance of the Second Five Year Plan.

Sri B. NARAYANASWAMY.—Is it the opinion of the Government that the Municipalities are not in need of the Second Five-Year Plan?

Sri K. HANUMANTHAIYA.—It is not.

Sri B. NARAYANASWAMY.—Just the Hon'ble Chief Minister has been pleased to say that the Municipalities have developed to such an extent that they need no help from the Government or some such thing. . . .

Sri K. HANUMANTHAIYA.—My Hon'ble friend has thoroughly misunderstood. They are ready with their plans much in advance of the scheduled time.

Mr. SPEAKER.—They are ready with the plans,

Sri B. NARAYANASWAMY.—So the Government is having those plans. Is it not?

Sri K. HANUMANTHAIYA.—Yes. Many of their plans are with us.

Sri K. S. VASAN.—Have concrete proposals been placed before this Government by the Kolar Deputy Commissioner?

Sri K. HANUMANTHAIYA.—He will have sent proposals. The proposals are not yet finalised.

Road from Nittoor to Hosakere.

Q.—472. Sri B. C. NANJUNDIAH (Kora).—

Will the Government be pleased to state:—

(*a*) the Department which formed the road from Nittoor village of Nittoor hobli, Gubbi taluk, to Hosakere village of Hagalvadi hobli, and when it was formed;

(*b*) the department under the supervision of which this road is at present;

(*c*) whether the acquisition proceedings in this connection have been completed and the amount of the award that has been given to the landlords;

(*d*) the amount of the award;

(*e*) how and from whom this amount was collected?

A.—Sri T. CHANNIAH (Minister for Public Health and Local Self-Government).—

(*a*) Public Works Department (Between the years 1945-47).

(*b*) The District Board, Tumkur.

(*c*) The acquisition proceedings are completed except for the passing of award.

(*d*) Does not arise in view of the reply to clause (*c*).

(*e*) The award amount has been ordered to be made available out of Village Panchayet Funds.

ಶ್ರೀ ಬಿ. ಸಿ. ನಂಜುಂಡಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ ಈ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದರೆಂದು ಹೇಳಿದ್ದೀರಿ, ಯಾರಿಂದ ಈ ಹಣವನ್ನು ವಸೂಲು ಮಾಡಿದ್ದೀರಿ ಎಂಬುದಕ್ಕೆ ಗ್ರಾಮ ಪಂಚಾಯಿತಿಯಿಂದ ವಸೂಲು ಮಾಡುವಂತೆ ಮಾಡುತ್ತೇವೆಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು?

ಶ್ರೀ ಟಿ. ಚೆನ್ನಯ್ಯ.—ಹಿಂದೆ ಇದು ಐ.ಪಿ.ಸಿ. ರಸ್ತೆಯಾಗಿತ್ತು; ಆದಕಾರಣ ರಸ್ತೆಗೆ ಆಗತಕ್ಕ ಹಣವನ್ನು ಜಿಲ್ಲಾಬೋರ್ಡ್ ಕೊಡಬೇಕಾಗಿತ್ತು; ಈಗ 'ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್' ನಿಂದ ಕೊಡಲಾಗಿದೆ, ಅದರಿಂದ ಅವರು ಕೊಡಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು 'ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್' ಹಣವನ್ನು ಹಂಚುವಾಗ ಎಲ್ಲೆಲ್ಲಿ ಐ.ವಿ.ಸಿ. ರಸ್ತೆಗಳಿವೆಯೋ ಅಲ್ಲೆಲ್ಲಾ ಹಾಗೆಯೇ ಮಾಡುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಕೆಲವು ಕಡೆ ಮಾಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹಿಂದೆ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್ ಮಾಡಿದಾಗ ಹೀಗೆ ಮಾಡಲಲ್ಲವೆಂಬುದು ಗೊತ್ತಿದೆಯೆ?

ಶ್ರೀ ಟಿ. ಚೆನ್ನಯ್ಯ.—ಹಣವನ್ನು ಕೊಟ್ಟಿರಲಿಲ್ಲ, ಅದರಿಂದ ನಿಧಾನವಾಯಿತು.

ಶ್ರೀ ಬಿ. ಸಿ. ನಂಜುಂಡಯ್ಯ.—ಬೇರೆಯವರ ತಪ್ಪಿಗಾಗಿ ಪಂಚಾಯಿತಿಯವರು ಇದನ್ನು ಕೊಡಬೇಕೆಂದು ಮಾಡಿದ್ದೀರಾ?

ಶ್ರೀ ಟಿ. ಚೆನ್ನಯ್ಯ.—ಹಾಗಲ್ಲ, ಅವರಲ್ಲಿ ಬೇರೆ ಹಣವಿಲ್ಲದಿದ್ದುದರಿಂದ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್ ಹಣದಿಂದ ಕೊಡಬೇಕೆಂದು ಮಾಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಸಂಬಂಧಪಟ್ಟ ಇಲಾಖೆಯವರು ಈ ರಸ್ತೆಯನ್ನು ಮಾಡಿದಾಗಲೇ ಜಮೀನಿಗೆ ಕಾಂಪೆನ್‌ಸೇಷನ್ ಕೊಟ್ಟಿದ್ದರೆ, ಹೀಗೆ ಪಂಚಾಯಿತಿಯವರು ಕೊಡಬೇಕಾದ ಸಂಭವವಿರಲಲ್ಲ ಅಲ್ಲವೆ?

ಶ್ರೀ ಟಿ. ಚೆನ್ನಯ್ಯ.—ಯಾವರೀತಿ ಕೊಡಬೇಕೆಂದು ಪರಿಶೀಲನೆಮಾಡಿ, ಆಗ ಹಣವಿಲ್ಲದಿದ್ದುದರಿಂದ ಈರೀತಿ ಮಾಡಲಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ನಾನು ಕೇಳುತ್ತಿರುವುದು, ಈ ರಸ್ತೆಯನ್ನು ಪ್ರಾರಂಭಮಾಡಿದಾಗ ಸಂಬಂಧಪಟ್ಟ ಇಲಾಖೆಯವರು ಕಾಂಪೆನ್‌ಸೇಷನ್ ಹಣವನ್ನು ಆಗಲೇ ಗೊತ್ತುಮಾಡಿ ಕೊಡದೇ ಇದ್ದುದರಿಂದ ಈಗ ಪಂಚಾಯಿತಿಯವರು ಕೊಡಬೇಕಾಯಿತಲ್ಲವೆ?

ಶ್ರೀ ಟಿ. ಚೆನ್ನಯ್ಯ.—ನಾನು ಮೊದಲೇ ಹೇಳಿದ ಹಾಗೆ, ಇದು ಐ.ವಿ.ಸಿ. ರಸ್ತೆಯಾದುದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆ ಕೊಡುವಹಾಗಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಎಲ್ಲೆಲ್ಲಿ ಐ.ವಿ.ಸಿ. ರಸ್ತೆಗಳಿವೆಯೋ ಅಲ್ಲೆಲ್ಲಾ ಹೀಗೆ ಮಾಡುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಎಲ್ಲ ಸ್ಥಳಗಳಲ್ಲಿಯೂ ಇಲ್ಲ, ಕೆಲವು ಸಂದರ್ಭಗಳಲ್ಲಿ ಮಾತ್ರ.

ಶ್ರೀ ಬಿ. ಸಿ. ನಂಜುಂಡಯ್ಯ.—ಹೊಸದಾಗಿ ಬಂದಿರುವ ಕಾನೂನು ಪ್ರಕಾರ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್‌ನಿಂದ ಹಣವನ್ನು ಕೊಟ್ಟದ್ದರಿಂದ ತಾನೆ ಹೀಗೆ ಪಂಚಾಯಿತಿಗಳಿಂದ ವಸೂಲು ಮಾಡುತ್ತಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಐ.ವಿ.ಸಿ. ರಸ್ತೆಗಳಿಗೂ ಅವರು ಖರ್ಚುಕೊಡತಕ್ಕ ಸಂಭವವಿಲ್ಲ. ಕೆಲವು ರಸ್ತೆಗಳ ಸಂಬಂಧದಲ್ಲಿ ಈ ಹಣವನ್ನು ಕೊಡುವುದಕ್ಕೆ ಪಬ್ಲಿಕ್‌ವರ್ಕ್ಸ್ ಇಲಾಖೆಯ ಜವಾಬ್ದಾರಿಯಿಲ್ಲದಿರುವುದರಿಂದ ಈ ಹಣವನ್ನು ಗ್ರಾಮಪಂಚಾಯಿತಿಗೆ ಕೊಡತಕ್ಕ ರೆವಿನ್ಯೂ ಅಸ್ಸೆಟ್ಸ್‌ಮೆಂಟಿನಿಂದ ಕೊಡಲಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಒಂದು ರಸ್ತೆಗೆ ಆ ಪಂಚಾಯಿತಿಯ ಲ್ಯಾಂಡ್ ರೆವಿನ್ಯೂ ಅಸ್ಸೆಟ್‌ಮೆಂಟ್ ಹಣ ನಿಮ್ಮ ಕೈಯಲ್ಲರುವ ಕಾರಣದಿಂದ ಹೀಗೆ ಮಾಡಿದ್ದೀರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ರಸ್ತೆಗಳಿಂದ ಈ ಗ್ರಾಮಗಳಿಗೆ ಅನುಕೂಲವಾಗುವುದರಿಂದ ಆಯಾ ಗ್ರಾಮ ಪಂಚಾಯಿತಿಯವರೇ ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ರಸ್ತೆ ಆದುದು ಯಾವುದೋ ಕಾಲದಲ್ಲ. 1952ರಲ್ಲಿ ಒಂದು ಕಾನೂನಾಗಿ ಅದರ ಪ್ರಕಾರ ಲ್ಯಾಂಡ್ ರೆವಿನ್ಯೂ ಅಸ್ಸೆಟ್‌ಮೆಂಟ್ ಶೇಕಡ 12½ ಕೊಡಬೇಕೆಂದು ಮಾಡಿದರೆ ಈಗ ಹೀಗೆ ಮಾಡುವುದು ಯುಕ್ತವೆ, ಧರ್ಮವೆ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮಗಳಿಗಾಗಿ ಈ ರಸ್ತೆಗಳನ್ನು ಮಾಡಿದ್ದರಿಂದ, ಆ ಗ್ರಾಮಗಳಿಗೆ ಸರ್ಕಾರದವರೇ ಕೊಟ್ಟ ಹಣದಿಂದ ಕೆಲವು ಭಾಗವನ್ನು ರಸ್ತೆಗಳಿಗಾಗಿ ಕೊಡುವುದರಲ್ಲಿ ಧರ್ಮವೂ ಇದೆ, ನ್ಯಾಯವೂ ಇದೆ.

Road works taken by District Board in Bangalore North and Devanahalli Taluks.

Q.—518. **Sri K. V. BYRE GOWDA** (Bangalore North).—

Will the Government be pleased to state:—

(*a*) the names of roads, the works of which are undertaken by the District Board in Bangalore North and Devanahalli Taluks up-to-date;

(*b*) the names of roads which are still remaining to be repaired;

(*c*) whether the roads constructed with the help of the Red Cross Society by way of relief measures in the said taluks have been taken by the District Board;

(*d*) the length and the particular portion taken over by the District Board in each road;

(*e*) whether steps have been taken to metal the said roads?

A.—**Sri T. CHANNIAH** (Minister for Public Health and Local Self-Government).—

(*a*) Please see list appended.
(*b*) Nil.
(*c*) Not yet.
(*d*) Does not arise.
(*e*) No.